ರಾಂಪುರ ತಲುಪುತ್ತದೆ ಎಂದು ಆಮೇಲೆ ಡ್ರೈವರಲ್ಲಿ ಕೇಳಿ ನಿನಗೆ ತಿಳಿಸಬೇಕಾಗುತ್ತದೆ. ಡೋಂಟ್ ವರಿ' ಎಂದರು ಖುಷಿಯಲ್ಲಿ.

'ಎಸ್. ನೀವು ಎಷ್ಟು ಹೊತ್ತಿಗೇ ಬನ್ನಿ. ನಾನು ಅಷ್ಟು ಹೊತ್ತಿಗೆ ಸರಿಯಾಗಿ ಬಸ್‌ಸ್ಟಾಂಡಿಗೆ ಬಂದು ನಿಲ್ಲುತ್ತೇನೆ. ಅಲ್ಲಿ ರಿಕ್ಷಾಗಳು ಇರುತ್ತವೆ. ಆದರೂ ನಿಮ್ಮನ್ನು ಕಾರಿನಲ್ಲೇ ನಮ್ಮ ಮನೆಗೆ ಕರೆತರುವುದು ನನಗೆ ಇಷ್ಟ. ನೀವು ಬಸ್ ಇಳಿದ ತಕ್ಷಣ ಒಂದು ರಿಂಗ್ ಕೊಟ್ಟರೆ ಸಾಕು, ನಾನು ರೆಡಿ'.

'ಛೆ ಛೆ! ಅಷ್ಟೆಲ್ಲಾ ಉಪಚಾರ ಬೇಡ ಜಯಂತಿ. ನಾನು ನಡುರಾತ್ರೆಯಲ್ಲಿ ಕೂಡಾ ನಿನ್ನ ಮನೆಗೆ ನಡೆದುಕೊಂಡು ಬರಲು ಹೆದರುವವನಲ್ಲ. ರಾಂಪುರದಲ್ಲೇ ಇದ್ದವನು ತಾನೇ?'

'ಅದು ನಿಜ ಅಣ್ಣಾ. ಆದರೆ ನಾನು ಬಂದರೆ ನಿಮಗೇನು ತೊಂದರೆ ಹೇಳಿ? ನೀವು ರಿಂಗ್ ಕೊಡುವುದೇ ಇಲ್ಲವೆಂದಾದರೆ ಖಂಡಿತ ನಾನು ಅಲರಾಂ ಇಟ್ಟು ನಾಲ್ಕು ಗಂಟೆಗೆ ಏಳುತ್ತೇನೆ, ಎದ್ದು ಮುಖ ತೊಳೆದು ನೇರವಾಗಿ ಬಸ್‌ಸ್ಟ್ಯಾಂಡಿಗೇ ಬರುತ್ತೇನೆ.'

ರಾಯರು 'ಅಲರಾಂ ಇಡುವುದು ಬೇಡ ಮಾರಾಯ್ತಿ. ನಾನು ರಿಂಗ್ ಕೊಟ್ಟ ತಕ್ಷಣ ಬಂದು ಬಿಡು' ಎಂದರು ಜಯಂತಿಗೆ. ಜಯಂತಿ ಅದಕ್ಕೆ ಒಪ್ಪಿ 'ಖಂಡಿತ ರಿಂಗ್ ಕೊಡಬೇಕು' ಎಂದು ಮತ್ತೆ ಮತ್ತೆ ರಾಯರನ್ನು ಒತ್ತಾಯಿಸಿದಳು.

ರಾಯರು ಸ್ಲೀಪಿಂಗ್ ಕೋಚ್ ಬಸ್ಸು ಹತ್ತಿ ಕುಳಿತ ಮೇಲೆ ಉದ್ದಕ್ಕೂ ಕಾಲು ಚಾಚಿದರು. ಮಲಗುವ ಮೊದಲು ಜಯಂತಿಗೆ ಒಂದು ರಿಂಗ್ ಕೊಟ್ಟು, ತಾನು 'ಹೊರಟಿದ್ದೇನೆ' ಎಂದು ಹೇಳಿದರು. ಫೋನನ್ನು ಎತ್ತಿಕೊಂಡ ಜಯಂತಿ 'ಖುಷಿಯಾಯಿತು ಅಣ್ಣ' ಎಂದಳು. ರಾಯರು ನಗುತ್ತ, 'ನೀನು ಒಮ್ಮೆ ಅಣ್ಣ ಎನ್ನುತ್ತಿ. ಇನ್ನೊಮ್ಮೆ ಸರ್ ಅನ್ನುತ್ತಿ. ಇದು ನಿನ್ನ ಅಭ್ಯಾಸ. ಎರಡೂ ಸರಿಯೇ. ಈ ಸಲ ಮಾತ್ರ 'ಸರ್' ಅಂತ ಕರೆಯುವುದು ಬೇಡ. ನಾನು ಅಣ್ಣನಾಗಿಯೇ ಈಗ ನಿನ್ನಾಚೆ ಬರುವವ!' ಎಂದರು.

ಜಯಂತಿ 'ಓ.ಕೆ. ಅಣ್ಣ, ಗುಡ್ ನೈಟ್' ಎಂದು ಹೇಳಿ 'ರಿಂಗ್ ಕೊಡಲು ಬೆಳಗ್ಗೆ ಮರೆಯಬೇಡಿ' ಎಂದು ಮತ್ತೆ ಒತ್ತಾಯಿಸಿ 'ಗುಡ್ ನೈಟ್' ಎಂದಳು.

ರಾಯರು ಬಸ್ಸಿನಲ್ಲಿ ಆರಾಮವಾಗಿ ಮಲಗಿ ನಿದ್ದೆಹೋದರು. ಸುಮಾರು ಎರಡು ಗಂಟೆಯ ಹೊತ್ತಿಗೆ ಬಸ್ಸು ನಿಂತಂತಾದಾಗ ಎದ್ದು ಕುಳಿತ ರಾಯರು, 'ಯಾರದೋ ಫಸ್ಟ್‌ಕಾಲ್‌ಗೆ ಬಸ್ಸು ನಿಂತಿರಬಹುದು' ಎಂದುಕೊಂಡರು. ತಾನೂ ಮೂತ್ರವಿಸರ್ಜನೆ ಮಾಡಿಬಿಡುವ ಎಂದುಕೊಂಡು ಡ್ರೈವರ್‌ನ ಸೀಟಿನ ಹತ್ತಿರ ಬಂದರು. ಡ್ರೈವರ್ 'ನಿಧಾನ ಇಳಿಯಿರಿ ಸರ್, ಬಸ್ ಬ್ರೇಕ್ ಡೌನ್ ಆಗಿದೆ. ಇಂಜಿನ್ನಿಗೆ ಸರಿಯಾಗಿ ಡೀಸೆಲ್ ಬರುತ್ತಿಲ್ಲ. ಯಾಕೆಂದು ಗೊತ್ತಿಲ್ಲ. ಇಲ್ಲಿಂದ ನಮ್ಮ ಡಿಪೋಗೆ ಫೋನ್ ಮಾಡುವ ಅಂದರೆ ಇಲ್ಲಿ ಮೊಬೈಲಿಗೆ ರೇಂಜ್ ಸಿಗುವುದಿಲ್ಲ' ಎಂದ.

ರಾಯರು 'ಎಂಥ ಗ್ರಹಚಾರ ಇದು!' ಎಂದು ಮೂತ್ರಶಂಕೆ ಮುಗಿಸಿ ಮತ್ತೆ ಬಸ್ ಹತ್ತಿದಾಗ, ಬಸ್ಸಿನಲ್ಲಿದ್ದವರಿಗೆಲ್ಲ ಎಚ್ಚರವಾಗಿತ್ತು. ಪ್ರತಿಯೊಬ್ಬರೂ ತಮ್ಮ ನಾಳಿನ ಕಾರ್ಯಕ್ರಮಗಳನ್ನು ತುಸು ದೊಡ್ಡದಾಗಿಯೇ ಹೇಳುತ್ತಾ ಯಾರನ್ನು ಬಯ್ಯಬೇಕು ಎಂದು ತಿಳಿಯದೇ ಸುಮ್ಮನೆ ಗೊಣಗುತ್ತಾ ಮಲಗಿಕೊಳ್ಳುವುದೇ ವಾಸಿ ಎಂಬಂತೆ ಸುಮ್ಮನಿದ್ದರು. ಆದರೆ ಕೆಲವರು 'ರಾಂಪುರಕ್ಕೆ ಎಷ್ಟು ದೂರ ಇದೆ?' ಎಂದು ಡ್ರೈವರನನ್ನು ಒಟ್ಟೊಟ್ಟಿಗೇ ಪ್ರಶ್ನೆ ಮಾಡಲು ಹೊರಟರೆ ಇನ್ನು ಹಲವರು ಡ್ರೈವರನಿಗೆ 'ನೀವು ಈ ದಾರಿಯಲ್ಲಿ ಬರುವ ಲಾರಿಯನ್ನು ಹಿಡಿದು ಅದರಲ್ಲಿ ಯಾಕೆ ಮುಂದೆ ಹೋಗಬಾರದು? ಆಮೇಲೆ ಎಲ್ಲಿ ಫೋನಿಗೆ ರೇಂಜ್ ಸಿಗುತ್ತೋ ಅಲ್ಲಿ ಇಳಿದು ನಿಮ್ಮ ಡಿಪೋವನ್ನು ಸಂಪರ್ಕಿಸಿ' ಎಂಬ ಸಲಹೆ ನೀಡತೊಡಗಿದ್ದರು. ಆದರೆ ಡ್ರೈವರನಿಗೆ ಗಾಡಿ ಬಿಟ್ಟು ಹೋಗಲು ಮನಸ್ಸಿಲ್ಲವಾಗಿತ್ತು. ಆತ ಕ್ಲೀನರಿಗೆ 'ನೀನು ಹೋಗಯ್ಯ' ಎಂದು ಹೇಳಿದ. ಆ ಕ್ಲೀನರನಾದರೋ 'ನೀವೇ ಹೋಗಿ' ಎಂದು ಡ್ರೈವರನನ್ನು ಗೋಗರೆದ. ಅಷ್ಟರಲ್ಲಿ ಪ್ರಯಾಣಿಕರೊಬ್ಬರು 'ನಾನು ಹೋಗುತ್ತೇನೆ' ಎಂದು ಡ್ರೈವರನಿಂದ ಕೆ.ಎಸ್. ಆರ್.ಟಿ.ಸಿ.ಯ ಡಿಪೋ ಮೆನೇಜರ್‌ರ ಫೋನು ನಂಬರ್ ಕಲೆಕ್ಟ್ ಮಾಡಿ ಬಸ್ಸಿನಿಂದ ಕೆಳಗಿಳಿದರು. ಆ ನಡುರಾತ್ರೆಯಲ್ಲಿ ದಾರಿಯಲ್ಲಿ ಬರುವ ಲಾರಿ ಕಾರುಗಳನ್ನು ನಿಲ್ಲಿಸಲು ಪ್ರಯತ್ನಿಸಿದರು. ಆದರೆ ಆ ದಾರಿಯ ವಾಹನಗಳಲ್ಲಿ ಬಂದ ಯಾರೂ 'ಏನಾಗಿದೆ?' ಎಂದು ಕೇಳದೆ ಅವರ ಪಾಡಿಗೆ ಅವರು ಹೊರಟು ಹೋಗುತ್ತಿದ್ದರು.

ಅದೃಷ್ಟವಶಾತ್ ಎನ್ನುವಂತೆ ಲಾರಿಯವನೊಬ್ಬ ನಿಲ್ಲಿಸಿ 'ಏನು?' ಎಂದು ಕೇಳಿದ. ಆಗ ಡ್ರೈವರನೇ ಕೆಳಗಿಳಿದು ಲಾರಿ ಡ್ರೈವರನಿಗೆ ಬಸ್ಸಿನ ಸಮಸ್ಯೆ ತಿಳಿಸಿದ. 'ಇನ್ನು ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿ ಒಂದು ಪುಟ್ಟ ಪೇಟೆ ಸಿಗುತ್ತದೆ. ಅಲ್ಲಿ ಫೋನಿನ ರೇಂಜ್ ಇದೆ ಎಂದು ನನ್ನ ಲೆಕ್ಕಾಚಾರ. ನೀವು ನಮ್ಮ ಒಬ್ಬ ಪ್ಯಾಸೆಂಜರನ್ನು ನಿಮ್ಮ ಲಾರಿಯಲ್ಲಿ ಕರೆದೊಯ್ದರೆ ಅವರು ಅಲ್ಲಿಂದ ನಮ್ಮ ಡಿಪೋಗೆ ಫೋನು ಮಾಡುತ್ತಾರೆ' ಎಂದು ವಿನಂತಿಸಿದ.

ಲಾರಿಯವನು ಆ ಪ್ರಯಾಣಿಕನನ್ನು ಕೂರಿಸಿಕೊಂಡು ಮುಂದೆ ನಡೆದ. ಸುಮಾರು ಐದೂವರೆಯ ಸುಮಾರಿಗೆ ಕೆ.ಎಸ್.ಆರ್. ಟಿ.ಸಿ. ಡಿಪೋದ ವಾಹನ ಮತ್ತು ಇಬ್ಬರು ಮೆಕ್ಯಾನಿಕ್‌ಗಳು ರಾಯರು ಇದ್ದ ಬಸ್ಸಿನಾಚೆ ಬಂದರು. ಅವರು ಒಂದಷ್ಟು ಹೊತ್ತು 'ಅದಲ್ಲ ಇದು', 'ಇದಲ್ಲ ಅದು' ಎಂದು ಬಸ್ಸಿನ ಇಂಜಿನ್ನಿನ ಡಿಫಾಲ್ಟ್‌ಗಳನ್ನು ಹುಡುಕತೊಡಗಿದರು. ಕೊನೆಗೆ ಬಸ್ ನಿಧಾನವಾಗಿ ಸ್ಟಾರ್ಟ್ ಆಗಿ ದೊಡ್ಡ ಶಬ್ದ ಎಬ್ಬಿಸಿ ತಾನು 'ಸರಿಯಾದೆ' ಎಂದಿತು.

ರಾಯರು, ಬಸ್ಸಿನಲ್ಲಿ ಸುಮ್ಮನೇ ಮಲಗಿಕೊಂಡರೂ ಜಯಂತಿ ಬಸ್‌ಸ್ಟ್ಯಾಂಡಿನಲ್ಲಿ ಆಗಲೇ ಬಂದು ಕಾಯುತ್ತಿರಬಹುದು ಎಂದು ಕೊಳ್ಳುತ್ತಾ 'ಅಯ್ಯೋ ಪಾಪ!' ಎಂದುಕೊಂಡರು. ಬಸ್ಸಿಗೆ ಆಕ್ಸಿಡೆಂಟ್ ಗೀಕ್ಸಿಡೆಂಟ್ ಆಗಿರಬಹುದು ಎಂದು ಆಕೆ ಖಂಡಿತ ಈಗ ಭಯಪಟ್ಟಿರುತ್ತಾಳೆ ಎಂದು ತಲ್ಲಣಿಸಿದರು. ಮೊಬೈಲ್‌ಗೆ ನೆಟ್‌ವರ್ಕ್ ಇಲ್ಲದ್ದರಿಂದ ಆಕೆಗೆ ಯಾವ ಇನ್‌ಫಾರ್ಮೇಶನ್ ಕೊಡಲಾಗುತ್ತಿರಲಿಲ್ಲವಲ್ಲ ಎಂದು ಚಡಪಡಿಸಿದರು.

ಬಸ್ ಆರು ಗಂಟೆಯ ಸುಮಾರಿಗೆ ಡ್ರೈವರ್ ಹೇಳಿದ ಪುಟ್ಟ ಪೇಟೆಯಾಚೆ ಬರುತ್ತಿದ್ದಂತೆ ರಾಯರು ಜಯಂತಿಗೆ ಫೋನ್ ಹಚ್ಚಿದರು. ಆ ಕಡೆಯಿಂದ ಆಕೆ 'ಅಣ್ಣಾ ಎಲ್ಲಿದ್ದೀರಿ? ಯಾಕಿಷ್ಟು ತಡ?' ಎನ್ನುತ್ತಿದ್ದಂತೆ ರಾಯರು ವಿಷಯವನ್ನೆಲ್ಲ ಆಕೆಗೆ ವಿವರಿಸಿದರು. 'ಎಂಟೂವರೆಯ ಮೊದಲು ನಾವು ರಾಂಪುರ ಬಸ್‌ಸ್ಟ್ಯಾಂಡ್ ತಲುಪುವುದು ಕಷ್ಟ ಎನ್ನುತ್ತಾರೆ ಡ್ರೈವರ್' ಎಂದವರೇ 'ನೀನು ನನ್ನನ್ನು ಕಾಯುವುದು ಬೇಡ. ನಾನು ರಿಕ್ಷಾದಲ್ಲೇ ನಿನ್ನ ಮನೆಗೆ ಬರುತ್ತೇನೆ' ಎಂದರು. ಆ ಕಡೆಯಿಂದ ಜಯಂತಿ 'ಬೇಡಣ್ಣ, ನಾನು ಬಂದೇ ಬರುತ್ತೇನೆ ಬಸ್‌ಸ್ಟ್ಯಾಂಡಿಗೆ' ಎಂದದ್ದಕ್ಕೆ ರಾಯರು, 'ನೋಡಮ್ಮಾ ನಿನಗೆ ಈ ದಿನ ಕಾಲೇಜಿಗೆ ಹೋಗಬೇಕಾಗಿದೆ ತಾನೇ? ನನ್ನನ್ನು ನೀನು ಕಾಯುತ್ತಾ ಕುಳಿತರೆ ಈ ದಿನ ನೀನು ರಜೆ ಹಾಕಬೇಕಾದೀತು. ನಿನ್ನ ಪಕ್ಕದ ಮನೆಯಲ್ಲಿ ನಿನ್ನ ಮನೆಯ ಕೀ ಕೊಟ್ಟು – 'ಶ್ರೀನಿವಾಸ ರಾವ್ ಎಂಬುವರು ಬರುತ್ತಿದ್ದಾರೆ. ಅವರು ಕೇಳಿದರೆ ಕೀ ಕೊಡಿ' ಎಂದು ಹೇಳಿ ಹೋಗು. ನಾನು ಬಸ್‌ಸ್ಟ್ಯಾಂಡಿನಲ್ಲಿ ಇಳಿದು ನಿಧಾನವಾಗಿ ಕಾಫಿ ತಿಂಡಿ ಮುಗಿಸಿ, ನಿನ್ನ ಮನೆಗೆ ಬರುತ್ತೇನೆ. ಆಮೇಲೆ ಸ್ನಾನ ತೀರಿಸಿ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ' ಎಂದು ಆಕೆಗೆ ಸಮಾಧಾನ ಹೇಳಿದರು.

ಜಯಂತಿ, 'ಅದೆಲ್ಲ ಬೇಡ ಅಣ್ಣ, ನಾನು ಆಗಲೇ ಅರ್ಧ ದಿನದ ಸಿ.ಎಲ್. ಹಾಕಿದ್ದೇನೆ' ಎಂದು ಹೇಳುತ್ತಾ ಫೋನು ಕಟ್ ಮಾಡಿದಳು.

ರಾಯರು ಎಂಟೂ ಮುಕ್ಕಾಲು ಗಂಟೆಯ ಸುಮಾರಿಗೆ ರಾಂಪುರ ಬಸ್ ಸ್ಟ್ಯಾಂಡಿನಲ್ಲಿ ಇಳಿದರು. ಸ್ಟ್ಯಾಂಡಿನ ಹೊರಗೆ ನಿಲ್ಲಿಸಿದ್ದ ಕಾರಿಗೆ ಒರಗಿ ನಿಂತಿದ್ದ ಜಯಂತಿ ದೂರದಿಂದಲೇ ಅವರನ್ನು ಗುರುತಿಸಿ ಆ ಕಡೆ ಧಾವಿಸಿ ಬಂದಳು. ರಾಯರು 'ಬೇಡ ಬೇಡ' ಎಂದರೂ ರಾಯರ ಬೃಹತ್ ಗಾತ್ರದ ಸೂಟುಕೇಸನ್ನು ಆಕೆ ಎಳೆದುಕೊಂಡು ಕಾರಿನಾಚೆ ಹೋಗಲು ಮುನ್ನುಗ್ಗಿದಾಗ ರಾಯರು 'ಪ್ಲೀಸ್, ನೀನು ಇದನ್ನು ಎತ್ತಿಕೊಂಡರೆ ನನಗೆ ನಾಚಿಕೆ ಆಗುತ್ತದೆ, ಬಿಡು!' ಎಂದರು.

ಜಯಂತಿಯ ಮನೆಗೆ ಬಂದ ರಾಯರು ಬ್ರಷ್ ಮಾಡುವ ಜೊತೆಗೇ ಸ್ನಾನವನ್ನೂ ತೀರಿಸಿ ಬರುವಷ್ಟರಲ್ಲಿ ಜಯಂತಿ 'ನಾನು ಕೇಳಿದೆ ಎಂದು ನೀವು ತಪ್ಪು ತಿಳಿದುಕೊಳ್ಳದಿದ್ದರೆ ಎಷ್ಟು ದಿನದ ಕ್ಯಾಂಪ್ ನಿಮ್ಮದು ಎಂದು ಕೇಳಬಹುದಾ?' ಎಂದು ಪ್ರಶ್ನಿಸಿದಳು.

ರಾಯರು 'ಎಷ್ಟು ದಿನ ಅಂತ ಲೆಕ್ಕ ಹಾಕಿಲ್ಲ! ಎರಡು ಮೂರು ದಿನದೊಳಗೆ ತಿರುಗಿ ಹೋದರೆ ಒಳ್ಳೇದು ಎಂದುಕೊಂಡಿದ್ದೇನೆ ನಾನು! ಆದರೆ ಅವಶ್ಯ ಬಿದ್ದರೆ ವಾರದ ತನಕವೂ ಇರಬಹುದು' ಎಂದು ಹೇಳಿದವರೇ 'ನೀನು ಸಮಸ್ಯೆಯನ್ನು ಈ ದಿನ ವಿವರವಾಗಿ ನನಗೆ ಹೇಳಬೇಕು. ಆಮೇಲೆ ಯಾವ ರೀತಿ ನಾವು ಮುಂದುವರಿಯಬೇಕು ಎಂದು ಪ್ಲಾನು ಹಾಕುವುದು' ಎಂದರು.

ಜಯಂತಿ 'ನನ್ನ ಮಗಳಿಗೆ ನೀನು ಈ ದಿನ